**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01.**

ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:40:2021-22 ದಿನಾಂಕ:14ನೇ ಜನವರಿ 2022

***: ಸು ತ್ತೋ ಲೆ :***

ವಿಷಯ: ಖಾಸಗಿ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣ ಆನ್‌ಲೈನ್ ಮೂಲಕ ನಿರ್ವಹಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ಶಿಕ್ಷಣ ಕಾಯ್ದೆ-1983. ಸೆಕ್ಷನ್-36

2] ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7[2]ಪ್ರಾಶಿಅ.ಮಾನ್ಯತೆ ಷರತ್ತು:23: 2018-19, ದಿನಾಂಕ:30.11.2018.

3] ಈ ಕಛೇರಿ ಜ್ಞಾಪನಾ ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:01: 2021-22, ದಿನಾಂಕ:04.08.2021.

4] ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:01: 2021-22 ದಿನಾಂಕ:02.12.2021, ದಿನಾಂಕ:11.12.2021 ಮತ್ತು ದಿ:28.12.2021

5] ಸರ್ಕಾರದ ಪತ್ರ ಸಂಖ್ಯೆ:ಇಪಿ:425:ಪಿಜಿಸಿ:2021, ದಿ:03.01.2022.

6] ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:05.01.2022

*****

ಮೇಲಿನ ವಿಷಯ ಹಾಗೂ ಉಲ್ಲೇಖದ ಪತ್ರಗಳಂತೆ ಖಾಸಗಿ ಅನುದಾನಿತ / ಅನುದಾನ ರಹಿತ ಶಾಲೆಗಳ ಮಾನ್ಯತೆ ನವೀಕರಣ ಮಾಡುವ ಬಗ್ಗೆ ಈಗಾಗಲೇ ಸುತ್ತೋಲೆ ಮತ್ತು ಪತ್ರಗಳ ಮೂಲಕ ಮಾರ್ಗದರ್ಶನವನ್ನು ನೀಡಲಾಗಿದೆ. ಆದಾಗ್ಯೂ ಮಾನ್ಯತೆ ನವೀಕರಣ ವಿಳಂಬವಾಗುತ್ತಿರುವ ಬಗ್ಗೆ ದೂರುಗಳು ಬಂದಿದ್ದು, 2019-20, 2020-21 ಹಾಗೂ 2021-22ನೇ ಸಾಲಿಗೆ 06 ರಿಂದ 08ನೇ ತರಗತಿ ಮತ್ತು 09 ಮತ್ತು 10ನೇ ಶಾಲೆಗಳಿಗೆ ನೋಂದಣಿಯನ್ನು ನೀಡಿ ಅನುಮತಿಸಲಾಗಿದೆ.

ಹೊಸದಾಗಿ ನೋಂದಣಿ ಪಡೆದ 06 ರಿಂದ 08ನೇ ತರಗತಿ ಶಾಲೆಗಳಲ್ಲಿ ಈ ಹಿಂದೆಯೇ 01 ರಿಂದ 05 ತರಗತಿಗಳು ನಡೆಯುತ್ತಿದ್ದಲ್ಲಿ ಹೊಸ ಡೈಸ್‌ಕೋಡ್ ಪಡೆಯುವ ಅವಶ್ಯಕತೆ ಇರುವುದಿಲ್ಲ. ಹಾಲಿ ಆ ಶಾಲೆಯಲ್ಲಿರುವ ಡೈಸ್ ಕೋಡ್ ನ್ನೇ ಬಳಸಿಕೊಂಡು 6 ರಿಂದ 08ನೇ ತರಗತಿವರೆಗೆ ನೀಡಿರುವ ನೋಂದಣಿಗೆ ಸಂಬಂಧಿಸಿದಂತೆ 01 ರಿಂದ 08ನೇ ತರಗತಿ ಎಂದು ಪರಿಗಣಿಸಿ ಮಾನ್ಯತೆಯನ್ನು ಮುಂದಿನ 05 ವರ್ಷಗಳಿಗೆ ನೀಡುವುದು.

ಹೊಸದಾಗಿ ನೋಂದಣಿ ಪಡೆದಿರುವ ಪ್ರೌಢಶಾಲೆ (09ನೇ ಮತ್ತು 10ನೇ ತರಗತಿ) ಯಲ್ಲಿ ಈ ಹಿಂದೆಯೇ 01 ರಿಂದ 08ನೇ ತರಗತಿಯವರೆಗೆ ಶಾಲೆಯು ನಡೆಯುತ್ತಿದ್ದಲ್ಲಿ ಹೊಸ ಡೈಸ್‌ಕೋಡ್ ಪಡೆಯುವ ಅವಶ್ಯಕತೆ ಇರುವುದಿಲ್ಲ. ಹಾಲಿ ಆ ಶಾಲೆಯಲ್ಲಿರುವ ಡೈಸ್ ಕೋಡ್ ನ್ನೇ ಬಳಸಿಕೊಂಡು 9 ಮತ್ತು 10ನೇ ತರಗತಿವರೆಗೆ ನೀಡಿರುವ ನೋಂದಣಿಗೆ ಸಂಬಂಧಿಸಿದಂತೆ 01 ರಿಂದ 10ನೇ ತರಗತಿ ಎಂದು ಪರಿಗಣಿಸಿ ಮಾನ್ಯತೆಯನ್ನು ಮುಂದಿನ 05 ವರ್ಷಗಳಿಗೆ ನೀಡುವುದು.

ಹೊಸದಾಗಿ ನೋಂದಣಿ ಪಡೆದಿರುವ ಶಾಲೆಗಳಿಗೆ ಸ್ಥಳ ಪರಿಶೀಲನೆ ಮಾಡಿ ಎಲ್ಲಾ ದಾಖಲಾತಿಗಳನ್ನು ಪಡೆದು ನೋಂದಣಿ ಮಾಡಿರುವುದರಿಂದ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಹಾಗೂ ಆರ್.ಟಿ.ಇ ಶುಲ್ಕ ಮರುಪಾವತಿಗೆ

ವಿಳಂಬಕ್ಕೆ ಅವಕಾಶ ನೀಡದೇ ಶಾಲೆಯಲ್ಲಿ ಮಕ್ಕಳು ದಾಖಲಾಗಿರುವ ಬಗ್ಗೆ ಹಾಗೂ ಶಾಲೆ ನಡೆಯುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು ಮಾನ್ಯತೆಯನ್ನು ವಿಳಂಭಕ್ಕೆ ಅವಕಾಶ ನೀಡದೆ ತಂತ್ರಾಂಶದ ಮೂಲಕ ನವೀಕರಿಸಿ ಪ್ರಮಾಣ ಪತ್ರ ವಿತರಿಸುವುದು. ವಿಳಂಬ ನೀತಿ ಅನುಸರಿಸಿದಲ್ಲಿ ನಿಮ್ಮಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

14/01/2022

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

*ಇವರಿಗೆ,*

01. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
02. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. [ಇವರು ಎಲ್ಲಾ ಖಾಸಗಿ ಅನುದಾನರಹಿತ ಆಡಳಿತ ಮಂಡಳಿ ಹಾಗೂ ಅನುದಾನರಹಿತ ಶಾಲಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ತಲುಪಿಸುವುದು]

*ಪ್ರತಿಯನ್ನು ಮಾಹಿತಿಗಾಗಿ.*

01. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.
02. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
03. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
04. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
05. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01.

ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:40:2021-22 ದಿನಾಂಕ:17ನೇ ಜನವರಿ 2022

## : ತಿದ್ದುಪಡಿ ಸು ತ್ತೋ ಲೆ :

ವಿಷಯ: ಖಾಸಗಿ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣ ಆನ್‌ಲೈನ್ ಮೂಲಕ ನಿರ್ವಹಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:01: ದಿನಾಂಕ:14ನೇ ಜನವರಿ 2022

* * * * *

ಮೇಲ್ಕಂಡ ವಿಷಯದಲ್ಲಿ ಉಲ್ಲೇಖಿದ ಸುತ್ತೋಲೆಯಲ್ಲಿ 2ನೇ ಪುಟದ 03ನೇ ಸಾಲಿನಲ್ಲಿ **"ನವೀಕರಿಸಿ"** ಎಂಬುದರ ಬದಲಾಗಿ **"ಕೂಡಲೇ"** ಎಂದು ಓದಿಕೊಳ್ಳತಕ್ಕದ್ದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

***ಇವರಿಗೆ,***

01. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
02. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. [ಇವರು ಎಲ್ಲಾ ಖಾಸಗಿ ಅನುದಾನರಹಿತ ಆಡಳಿತ ಮಂಡಳಿ ಹಾಗೂ ಅನುದಾನರಹಿತ ಶಾಲಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ತಲುಪಿಸುವುದು]

***ಪ್ರತಿಯನ್ನು ಮಾಹಿತಿಗಾಗಿ.***

01. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.
02. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
03. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
04. ಕಛೇರಿ ಪ್ರತಿ.